ಇಂದು ದಿ: **16.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು: **2** ನೇ ಪ್ರತಿವಾದಿಯ ಪರ : ಶ್ರೀಮತಿ ಬಿ ಆರ್ ಆರ್ ,ವಕೀಲರಿಂದ

ಭಾಗದ ವಿಚಾರವಾಗಿ ನಮ್ಮ ತಂದೆಯ ಆಸ್ತಿಗಳ ಮೇಲೆ ದಾವೆಯನ್ನು ಸಲ್ಲಿಸಿರುತ್ತೇನೆ. ಈಗ ನಮ್ಮ ತಂದೆ ಮೃತಪಟ್ಟಿರುತ್ತಾನೆ. ನಮ್ಮ ತಂದೆ 2024 ಮಾರ್ಚ್ ತಿಂಗಳಲ್ಲಿ ಮೃತಪಟ್ಟಿರುತ್ತಾನೆ. ನಮ್ಮ ತಂದೆ ಮೃತಪಡುವ ಸಮಯದಲ್ಲಿ 2 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದನು. ನಮ್ಮ ತಾಯಿ ಮೃತಪಟ್ಟ 1 ತಿಂಗಳಿನಿಂದ ನಮ್ಮ ತಂದೆ 2 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದ. ನಮ್ಮ ತಾಯಿ ಜೀವಂತ ಇದ್ದಾಗ ಶ್ರೀರಾಂಪುರದಲ್ಲಿ ನಮ್ಮ ತಂದೆ ಮತ್ತು ತಾಯಿ ಪ್ರತ್ಯೇಕವಾಗಿ ವಾಸವಾಗಿದ್ದರು. ನಮ್ಮ ತಾಯಿ 2021 ರ ನವೆಂಬರ್ ನಲ್ಲಿ ಮೃತಪಟ್ಟಿರುತ್ತಾಳೆ. ಈ ದಾವೆಯನ್ನು ಸಲ್ಲಿಸುವಾಗ ನಮ್ಮ ತಾಯಿ ಜೀವಂತ ಇರಲಿಲ್ಲ. ನಮ್ಮ ತಂದೆ ತಾಯಿ ಜೀವಂತ ಇದ್ದಾಗ ಭಾಗ ಬೇಕು ಎಂದು ನಾನು ಕೇಳಿದ್ದೆ. ಎಲ್ಲಾ ಆಸ್ತಿಗಳಲ್ಲಿ ನಾನು ಭಾಗ ಕೇಳಿದ್ದೆ. ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತವೆ ಎಂದು ದಾವೆಯನ್ನು ಸಲ್ಲಿಸುವಾಗ ನಾನು ತಿಳಿದುಕೊಂಡಿದ್ದೆನು. ಹೌಸ್ ಲೀಸ್ಟ್ ಮತ್ತು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಗವಿರಂಗಾಪುರದ ಸರ್ವೇ ನಂ. 106/2 ರ ಜಮೀನು ನಮ್ಮ ತಾಯಿಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಾಯಿಗೆ ಅವರ ತಂದೆ ಕೊಟ್ಟಿದ್ದ. ನಮ್ಮ ತಾಯಿಗೆ ಅವರ ತಂದೆ ಕೊಟ್ಟಿದ್ದರಿಂದ, ಸದರಿ ಆಸ್ತಿ ನಮ್ಮ ತಂದೆಗೆ ಮತ್ತು ಕುಟುಂಬದ ಇತರೆ ಸದಸ್ಯರಿಗೆ ಸೇರತಕ್ಕದ್ದಲ್ಲ ಎಂದರೆ ಸರಿಯಲ್ಲ.

ದಾವಾ 2 ನೇ ಆಸ್ತಿಯು ನಮ್ಮ ತಂದೆಗೆ ಸರ್ಕಾರದಿಂದ ಮಂಜೂರು ಆಗಿತ್ತು. ಸದರಿ ಆಸ್ತಿ ಪಿತ್ರಾರ್ಜಿತವಾಗಿ ಬಂದ ಆಸ್ತಿ ಅಲ್ಲ ಎನ್ನುವುದು ನಿಜ. ದಾವಾ 3 ನೇ ಆಸ್ತಿ ನಮ್ಮ ತಂದೆಯ ಸ್ವಯಾರ್ಜಿತವಾದ ಆಸ್ತಿ ಎನ್ನುವುದು ನಿಜ. ಸದರಿ ಆಸ್ತಿಯನ್ನು ನಮ್ಮ ತಂದೆ 2007 ರಲ್ಲಿ ಖರೀದಿ ಮಾಡಿದ್ದ. ಆ ಸಮಯದಲ್ಲಿ ನನ್ನ ಮದುವೆ ಆಗಿತ್ತು ಎನ್ನುವುದು ನಿಜ. ನನ್ನ ಮದುವೆ 2000 ನೇ ಸಾಲಿನಲ್ಲಿ ಆಗಿರುತ್ತದೆ. ನಮ್ಮ ತಂದೆ ಕೃಷಿ ಇಲಾಖೆಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಎನ್ನುವುದು ನಿಜ. 2 ನೇ ಪ್ರತಿವಾದಿ ಕೆ ಎಸ್ ಆರ್ ಟಿ ಸಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎನ್ನುವುದು ನಿಜ. 2 ನೇ ಪ್ರತಿವಾದಿ 2006 ನೇ ಇಸವಿಯಲ್ಲಿ ಚಾಲಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ದಾವಾ 3 ನೇ ಆಸ್ತಿಯನ್ನು ಖರೀದಿ ಮಾಡುವಾಗ ನಮ್ಮ ತಂದೆ ನಿವೃತ್ತನಾಗಿದ್ದು, 2 ನೇ ಪ್ರತಿವಾದಿ ನೌಕರಿ ಮಾಡುತ್ತಿದ್ದ ಎನ್ನುವುದು ನಿಜ. ದಾವಾ 4 ನೇ ಆಸ್ತಿ ಶ್ರೀರಾಂಪುರದಲ್ಲಿ ಇರುತ್ತದೆ. ಸದರಿ ಆಸ್ತಿಯ ನಿವೇಶನವನ್ನು ನಮ್ಮ ತಂದೆ 1995-96 ರಲ್ಲಿ ಓಂಕಾರಮೂರ್ತಿ ಬಿನ್ ಬಸಪ್ಪ ಇವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದ ಎನ್ನುವುದು ನಿಜ. ನಮ್ಮ ತಂದೆ ತಾನು ಕೆಲಸ ಮಾಡುತ್ತಿದ್ದ ಇಲಾಖೆಯಿಂದ ಸಾಲ ಪಡೆದು ದಾವಾ 4 ನೇ ಆಸ್ತಿಯಲ್ಲಿ ಮನೆ ಕಟ್ಟಿರುತ್ತಾನೆ ಎನ್ನುವುದು ನಿಜ. ದಾವಾ 4 ನೇ ಆಸ್ತಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಎನ್ನುವುದು ನಿಜ. ನಮ್ಮ ತಂದೆ ತಾನು ಮೃತಪಟ್ಟ ನಂತರ ಆಸ್ತಿಗಳು ಎಲ್ಲರಿಗೂ ಸೇರತಕ್ಕದ್ದು ಎಂದು ಬರವಣಿಗೆ ಮಾಡಿರುವುದನ್ನು ಹಾಜರುಪಡಿಸಿಲ್ಲ. ಸದರಿ ವಿಷಯವನ್ನು ವಾದ ಪತ್ರದಲ್ಲಿ ಬರೆಸಿಲ್ಲ. ಈ ಕೇಸನ್ನು ಸಲ್ಲಿಸುವಾಗ ನಮ್ಮ ತಂದೆ ಜೀವಂತ ಇದ್ದಾಗ ಅವರನ್ನು ನಾನು ಹೋಗಿ ಕೇಳಿಲ್ಲ. ದಾವಾ 1 ರಿಂದ 4 ನೇ ಆಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಮ್ಮ

ತಂದೆಯ ಯೋಗಕ್ಷೇಮವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಎನ್ನುವುದು ನಿಜ. ನಮ್ಮ ತಂದೆ 2 ಮತ್ತು 3 ನೇ ಪ್ರತಿವಾದಿಗಳಿಗೆ ದಿಃ 08.04.2022 ರಂದು ಮೃತ್ಯುಪತ್ರವನ್ನು ಬರೆದುಕೊಟ್ಟಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಮೃತ್ಯುಪತ್ರದಲ್ಲಿ 2 ನೇ ಪ್ರತಿವಾದಿಗೆ ಅರ್ಧ ಭಾಗ, 3 ನೇ ಪ್ರತಿವಾದಿಗೆ ಅರ್ಧ ಭಾಗ ದಾವಾ 2 ರಿಂದ 4 ನೇ ಆಸ್ತಿಗಳಲ್ಲಿ ಹೋಗಬೇಕು ಎಂದು ನಮ್ಮ ತಂದೆ ಹೇಳಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಮೃತ್ಯು ಪತ್ರದ ಪ್ರಕಾರ ದಾವಾ 2 ರಿಂದ 4 ನೇ ಆಸ್ತಿಗಳು 2 ಮತ್ತು 3 ನೇ ಪ್ರತಿವಾದಿಗೆ ಸೇರತಕ್ಕದ್ದು ಎಂದರೆ ಸಾಕ್ಷಿ ನನಗೂ ಆಸ್ತಿ ಬೇಕು ಎಂದು ಹೇಳುತ್ತಾರೆ.

ನನ್ನ ಗಂಡ ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಾನೆ. ನಮಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರಲ್ಲಿ ಒಬ್ಬಳು ಮೆಡಿಕಲ್ ಇನ್ನೊಬ್ಬಳು ಇಂಜಿನಿಯರಿಂಗ್ ಓದುತ್ತಿದ್ದಾರೆ. ನಮ್ಮ ಹಾಗೂ 2 ಮತ್ತು 3 ನೇ ಪ್ರತಿವಾದಿಗಳ ಮಧ್ಯೆ ದಾವಾ 2 ನೇ ಆಸ್ತಿಯಲ್ಲಿ ಗಲಾಟೆ ಆಗಿರುತ್ತದೆ ಎನ್ನುವುದು ನಿಜ. ಆ ಸಮಯದಲ್ಲಿ ನಾನು ಫಿರ್ಯಾದಿ ಕೊಟ್ಟಿದ್ದೆ ಎಂದರೆ ಸಾಕ್ಷಿ ಅವರೇ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಮ್ಮ ತಾಯಿ ಜೀವಂತ ಇದ್ದಾಗ ಒಡವೆಗಳು ನನಗೆ ಸೇರಬೇಕು ಎಂದು ಹೇಳಿದ್ದಳು. ಒಡವೆಗಳನ್ನು ನಾನೇ ತೆಗೆದುಕೊಂಡು ಹೋಗಿ ಆಸ್ತಿಗಳಲ್ಲಿ ಹಕ್ಕು ಇಲ್ಲದೇ ಇದ್ದರು ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ 1 ರಿಂದ 4 ನೇ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ 2 ರಿಂದ 4 ನೇ ಆಸ್ತಿಗಳು ನಮ್ಮ ತಂದೆ ಯ ಸ್ವಯಾರ್ಜಿತವಾದ ಆಸ್ತಿಗಳು ಆಗಿದ್ದರಿಂದ, ಅವುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ : ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.